# ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ

## ಮಾಹಿತಿ ಹಕ್ಕು ಕಾಯಿದೆ, 2005
## (ಕಾಯಿದೆಯ ಕಲಂ 4ರ ಅಡಿಯಲ್ಲಿ ಬಯಸಲಾದ ಮಾಹಿತಿ)

### 2005ರ ಮಾಹಿತಿ ಹಕ್ಕು ಕಾಯಿದೆಯ ಅಡಿಯಲ್ಲಿ ಮಾಹಿತಿಯನ್ನು ಪಡೆಯಲು ಸಾರ್ವಜನಿಕರಿಗಾಗಿ ಪ್ರಕಟಿಸಲಾದ ಅರ್ಜಿಯ ಕಾರ್ಯವಿಧಾನ

1. ಮಾಹಿತಿ ಹಕ್ಕು ಕಾಯಿದೆ 2005ರ ಅಡಿಯಲ್ಲಿ (ಇಲ್ಲಿಂದ ಮುಂದೆ 'ಕಾಯಿದೆ' ಎಂದು ಉಲ್ಲೇಖಿಸಲಾಗುವುದು) ಮಾಹಿತಿಯನ್ನು ಪಡೆಯ ಬಯಸುವ ಸಾರ್ವಜನಿಕ ಸದಸ್ಯರು, ತಮ್ಮ ಕೋರಿಕೆಯನ್ನು ಈ ಕೆಳಕಂಡ ವ್ಯವಸ್ಥಾ ಶೈಲಿಯಲ್ಲಿ (ಫಾರ್ಮ್ಯಾಟ್) ಬಿಳಿಯ ಹಾಳೆಯಲ್ಲಿ ಬರೆದು ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್, ಮೂರನೇ ಮಹಡಿ, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು – 27 ಈ ವಿಳಾಸಕ್ಕೆ ಕಳುಹಿಸತಕ್ಕದ್ದು.

(ಎ) ಮಾಹಿತಿ ಪಡೆಯಲು ಬಯಸುವ ವ್ಯಕ್ತಿಯ ಹೆಸರು, ಆತನ/ಆಕೆಯ ವಯಸ್ಸು, ವೃತ್ತಿ ಹಾಗೂ ಅಂಚೆ ವಿಳಾಸದೊಂದಿಗೆ ದೂರವಾಣಿ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ, ಇ–ಮೇಲ್ ಐಡಿ ಇವು ಯಾವುದಾದರೂ ಇದ್ದಲ್ಲಿ,

(ಬಿ) ಬಯಸಲಾದ ಮಾಹಿತಿಯ ಸ್ವರೂಪ – ಅಂದರೆ ಆಧಾರಾಂಶಗಳು, ದಾಖಲೆಗಳ ಉದ್ಧರಣಗಳು, ಟಿಪ್ಪಣಿಗಳು ಇತ್ಯಾದಿ – ಅಥವಾ ದಾಖಲೆಗಳ ಪರಿಶೀಲನೆ ಇತ್ಯಾದಿ.

(ಸಿ) ಬಯಸಲಾದ ಮಾಹಿತಿ ಹಾಗೂ ಪರಿಶೀಲನೆ ಕುರಿತು ಖಚಿತ ಹಾಗೂ ನಿರ್ದಿಷ್ಟ ಪರಿಭಾಷೆಯಲ್ಲಿ ಕೋರಿಕೆ.

(ಡಿ) ಕಂಪನಿಯ ವೆಬ್ ಸೈಟ್‌ನಲ್ಲಿ / ಕಂಪನಿಯು ಸಾರ್ವಜನಿಕರ ಸುಲಭಗಮ್ಯತೆಗೆ ಸಾಧ್ಯವಾಗಬಲ್ಲಂತೆ ಪ್ರಕಟಿಸಿದ ದಸ್ತಾವೈಜುಗಳಲ್ಲಿ, ಕೋರಲ್ಪಟ್ಟ ಮಾಹಿತಿಯು ಲಭ್ಯವಾಗುತ್ತಿಲ್ಲವೇ,

(ಇ) ಕೋರಿಕೆಯು ಸ್ವೀಕಾರಾರ್ಹವಾಗುವ ಸಂದರ್ಭದಲ್ಲಿ ಗೊತ್ತುಪಡಿಸಲಾದ ಶುಲ್ಕವನ್ನು ಪಾವತಿಸಲು ಸಮ್ಮತಿಸುವಿರೇ 'ಬಡತನ ರೇಖೆಯ ಕೆಳಗೆ ಬರುವವರಾಗಿದ್ದಲ್ಲಿ, ಆತ / ಆಕೆಯು ಈ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ರುಜುವಾತು ಹಾಜರುಪಡಿಸುವಿರೇ

ಮೇಲ್ಕಂಡ ವ್ಯವಸ್ಥಾ ಶೈಲಿ (ಫಾರ್ಮ್ಯಾಟ್) ಗೆ ಅನುಗುಣವಾಗಿಲ್ಲದ ಅಸ್ಪಷ್ಟ ಹಾಗೂ ಅಪೂರ್ಣ ಕೋರಿಕೆಗಳು ಪುರಸ್ಕಾರಾರ್ಹವಾಗುವುದಿಲ್ಲ.

2. ಸಾರ್ವಜನಿಕ ಮಾಹಿತಿ ಅಧಿಕಾರಿಯು (ಸಾ.ಮಾ.ಅ) ನೇರವಾಗಿಯಾಗಲೀ ಅಥವಾ ಕಂಪನಿಯ ಯಾವುದೇ ನೆಲೆಯ ಮೂಲಕವಾಗಲೀ ಪಡೆದ ಕೋರಿಕೆಗಳಿಗೆ ಸ್ವೀಕೃತಿ ದಿನಾಂಕ ಹಾಗೂ ಕೋರಿಕೆಯನ್ನು ಕುರಿತಂತೆ ತೆಗೆದುಕೊಳ್ಳಲಾಗುವ ಕ್ರಮದ ಪ್ರಕ್ರಿಯೆಯನ್ನು ನಮೂದಿಸಿ ಸ್ವೀಕೃತಿ ದಾಖಲೆ ನೀಡುವರು.

ಕಾಯಿದೆಯಲ್ಲಿ ಅಡಕವಾಗಿರುವುದೇನೇ ಇದ್ದರೂ ಸಹ,

(ಎ) ಯಾವುದೇ ನ್ಯಾಯಾಲಯದಿಂದ ಅಥವಾ ಟ್ರಿಬ್ಯೂನಲ್‌ನಿಂದ, ಪ್ರಕಟಣೆಯನ್ನು ನಿರ್ಷ್ಟ ಉದ್ದೇಶದಿಂದಾಗಿ ನಿಷೇಧಿಸಲ್ಪಟ್ಟ ಮಾಹಿತಿಗಳು ಅಥವಾ ಅಂತಹುಗಳನ್ನು ಬಹಿರಂಗಗೊಳಿಸುವುದರಿಂದ ನ್ಯಾಯಾಲಯ ನಿಂದನೆಯಾಗುವುದೋ ಅಂತಹ ಮಾಹಿತಿಗಳು:

(ಬಿ) ವಾಣಿಜ್ಯ ವಿಶ್ವಾಸ ವ್ಯಾಪಾರ ರಹಸ್ಯಗಳು, ಅಥವಾ ಬೌದ್ಧಿಕ ಸ್ವಾಮ ಸೇರಿದಂತೆ ಯಾವುಗಳ ಬಹಿರಂಗದಿಂದ ಮೂರನೆಯ ಪಕ್ಷದ ಸ್ಪರ್ಧಾತ್ಮಕ ಸ್ಥಾನಕ್ಕೆ ಹಾನಿಯಾಗಬಲ್ಲದೋ ಅಂತಹ ಮಾಹಿತಿಗಳು:

(ಸಿ) ಮೇಲ್ಕಂಡ ಮಾಹಿತಿಗಳೇ ಅಲ್ಲದೇ ಕಾಯಿದೆಯ ಅಡಿಯಲ್ಲಿ ವಿನಾಯಿತಿಸಲ್ಪಟ್ಟ ಇತರೆ ಮಾಹಿತಿಗಳು:

ಯಾವುದೇ ನಾಗರೀಕನಿಗೆ ನೀಡುವ ಬದ್ಧತೆ ಕಂಪನಿಗೆ ಇರುವುದಿಲ್ಲ.

3. ಕಾಯಿದೆಯ ಅಡಿಯಲ್ಲಿ ಕೋರಿಕೆಯನ್ನು ಪುರಸ್ಕರಿಸಬಹುದೆಂದಾದಲ್ಲಿ ಅರ್ಜಿದಾರನಿಗೆ ಪಾವತಿಸಬೇಕಾದ ಗೊತ್ತುಪಡಿಸಿದ ಶುಲ್ಕದ ಮೊತ್ತ, ಪಾವತಿಯ ವಿಧಾನ ಹಾಗೂ ಪಾವತಿಸಲು ಇರುವ ಕಾಲಮಿತಿ ಇವನ್ನು ತಿಳಿಸಲಾಗುವುದು. ಗೊತ್ತುಪಡಿಸಲಾದ ಶುಲ್ಕ ಪಾವತಿಯ ಸ್ವೀಕೃತಿಯ ನಂತರ ಕಾಯಿದೆಯಡಿಯಲ್ಲಿ ಗೊತ್ತುಪಡಿಸಿರುವ ಕಾಲಾವಧಿಯ ಒಳಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕೋರಲಾದ ಮಾಹಿತಿಯ್ನು ಮುದ್ರಿತ ನಮೂನೆಯಲ್ಲಿ ಕಳಿಸಿಕೊಡಲಾಗುವುದು. ಒಂದು ವೇಳೆ ವಾಯಿದೆಯೊಳಗೆ ಯಾವುದೇ ಶುಲ್ಕ ಸಂದಾಯವಾಗದಿದ್ದಲ್ಲಿ ಅಥವಾ ವಾಯಿದೆಯ ನಂತರ ಶುಲ್ಕ ಸಂದಾಯವಾದಲ್ಲಿ ಕೋರಿದ ಮಾಹಿತಿಯನ್ನು ಒದಗಿಸುವ ತನ್ನ ಹೊಣೆಗಾರಿಕೆಯಿಂದ ಕಂಪನಿಯು ಮುಕ್ತವಾಗುವುದು ಮತ್ತು ಸಂದಾಯ ಮಾಡಲಾದ ಅಂತಹ ಯಾವುದೇ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

ಗೊತ್ತುಪಡಿಸಲಾದ ಶುಲ್ಕ ದರಗಳು ಇಂತಿವೆ.

(ಎ) ಕಲಂ–6ರ ಉಪಕಲಂ (1) ರ ಅಡಿಯಲ್ಲಿ ಮಾಹಿತಿಯನ್ನು ಪಡೆಯಲು ಸಲ್ಲಿಸಬೇಕಾದ ಅರ್ಜಿಯ ಶುಲ್ಕ – ರೂ.10/–

(ಬಿ) ಕಲಂ 7 ರ ಉಪ ಕಲಂ 1) ರ ಅಡಿಯಲ್ಲಿ ಮಾಹಿತಿಯನ್ನು ಒದಗಿಸಲು ತಯಾರಿತ ಅಥವಾ ಪ್ರತಿ ಮಾಡಿದ ಪ್ರತಿ ಎ–4 ಅಥವಾ ಎ–3 ಅಳತೆಯ ಪುಟಕ್ಕೆ ರೂ. 1 ಪರಂತು, ಭೂಪಟಗಳು ನಕ್ಷೆಗಳು, ವರದಿಗಳು, ಅಂಶಿಕ ದಾಖಲೆ ಅಥವಾ ತಾಂತ್ರಿಕ ಮಾಹಿತಿಗಳಿಗೆ ಸಂಭಂದ ಪಟ್ಟಂತೆ ಬಳಸಲಾದ ಶ್ರಮ ಮತ್ತು ಸಾಮಗ್ರಿಗಳ ವೆಚ್ಚ ಮತ್ತು ಸಂದರ್ಭಕ್ಕನುಸಾರವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಕ್ತ ಶುಲ್ಕವನ್ನು ನಿಗಧಿ ಪಡಿಸತಕ್ಕದ್ದು. ದಾಖಲೆಯ ಪರಿಶೀಲನೆಗೆ ಮೊದಲ ಒಂದು ಘಂಟೆಗೆ ಯಾವುದೇ ಶುಲ್ಕವಿಲ್ಲ. ತದನಂತರದ ಪ್ರತಿ 30 ನಿಮಿಷಕ್ಕೆ (ಅಥವಾ ಇದರ ಭಾಗಾಂಶಗಳಿಗೆ) ರೂ. 20/–

(ಸಿ) ಕಲಂ 7 ರ ಉಪ ಕಲಂ (5) ರ ಅಡಿಯಲ್ಲಿ ಮಾಹಿತಿಯನ್ನು ಒದಗಿಸಲು ಡಿಸ್ಕೆಟ್ ಅಥವಾ ಫ್ಲಾಪೀ ಒಂದಕ್ಕೆ 50. ರೂ .

(ಡಿ) 'ಬಡತನ ರೇಖೆಯ ಅಡಿ'ಯಲ್ಲಿನವರಿಗೆ ಯಾವುದೇ ಶುಲ್ಕ ಪಾವತಿಯಿಲ್ಲ. ಶುಲ್ಕವನ್ನು ಅಧಿಕೃತ ರಸೀದಿಗೆ ಪ್ರತಿಯಾಗಿ ನಗದಾಗಿ, ಇಲ್ಲವೇ ಡಿ ಡಿ ಅಥವಾ ಬ್ಯಾಂಕರ್ಸ್ ಚೆಕ್ ಮೂಲಕ ಬಿ.ಎಂ.ಆರ್.ಸಿ.ಎಲ್. ಬೆಂಗಳೂರು ಇವರಿಗೆ ಪಾವತಿಸುವಂತೆ – ಸ್ವೀಕರಿಸಲಾಗುವುದು. ಕೋರಿಕೆಯು ಪುರಸ್ಕಾರಾರ್ಹವೆಂದು ಕಂಡುಬಾರದಿದ್ದಲ್ಲಿ ಈ ಬಗ್ಗೆ ಅರ್ಜಿದಾರನಿಗೆ ಕಾರಣಗಳನ್ನು ತಿಳಿಸಿ, ಈ ವಿಚಾರವನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ತಿಳಿಸಲಾಗುವುದು ಹಾಗೂ ಕೋರಿದ ವಿಷಯದ ಮೇಲೆ ಮುಂದುವರಿದ ಪತ್ರ ವ್ಯವಹಾರವನ್ನು ಮಾನ್ಯ ಮಾಡುವುದಿಲ್ಲ.

4. ಕಾಯಿದೆಯ ಅಡಿಯಲ್ಲಿ ಗೊತ್ತುಪಡಿಸಲಾದ ಕಾಲಾವಧಿಯಲ್ಲಿ ತೀರ್ಮಾನ ವನ್ನು ಪಡೆಯದ ಅಥವಾ ಸಾರ್ವಜನಿಕ ಮಾಹಿತಿ ಅದಿಕಾರಿಯ ತೀರ್ಮಾನದಿಂದ, ಅತೃಪ್ತರಾದ ಅರ್ಜಿದಾರನು ಆ ಕಾಲಾವಧಿಯ ಮುಕ್ತಾಯ ದಿನದಿಂದ ಅಥವಾ ಅಂತಹ ತೀರ್ಮಾನದ ಸ್ವೀಕೃತಿಯ ದಿನಾಂಕದಿಂದ 30 ದಿನಗಳೊಳಗಾಗಿ ಕಂಪನಿಯು ನಿರ್ದಿಷ್ಟ ಪಡಿಸಿದ ಮೇಲ್ಮನವಿ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಬಹುದು.

# ಅಧ್ಯಾಯ-1

## <u>ಸಂಸ್ಥೆಯ ಬಗ್ಗೆ ವಿವರಗಳು, ಕಾರ್ಯಚಟುವಟಿಕೆಗಳು ಹಾಗೂ ಕರ್ತವ್ಯಗಳು</u>

- 'ಬೆಂಗಳೂರು ಮಾಸ್ ರ್‍ಯಾಪಿಡ್ ಟ್ರ್ಯಾನ್ಸಿಟ್ ಲಿಮಿಟೆಡ್' ಎಂಬ ಹಸರಿನಲ್ಲಿ ಒಂದು ನಿಯಮಿತ ಕಂಪನಿಯ ಸ್ಥಾಪನೆಗೆ ಸರ್ಕಾರಿ ಮಂಜೂರಾತಿ ಆದೇಶದ ಸ್ವೀಕೃತಿ ಜಿ. ಓ. ಸಂಖ್ಯೆ ಹೆಚ್.ಯು.ಡಿ 19 ಬಿ.ಎಂ ಆರ್ 94 ದಿನಾಂಕ 20–09–1994.

- ದಿನಾಂಕ 21 ಸೆಪ್ಟೆಂಬರ್ 1994 ರಂದು ಕಂಪನಿಯು ಸಂಘಟಿತವಾಯಿತು.

- ದಿನಾಂಕ 12 ಸೆಪ್ಟೆಂಬರ್ 2005 ರಿಂದ ಜಾರಿಗೆ ಬರುವಂತೆ, ಕಂಪನಿಯ ಹಸರು 'ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಲಿಮಿಟೆಡ್' ಎಂದು ಬದಲಾಯಿಸಲ್ಪಟ್ಟಿತು.

- ಬೆಂಗಳೂರು ನಗರದ ಎರಡು – ಒಂದು ಪೂರ್ವ ಪಶ್ಚಿಮ ದಿಕ್ಕಿನಲ್ಲಿ ಮತ್ತೊಂದು ಉತ್ತರ ದಕ್ಷಿಣ ದಿಕ್ಕಿನಲ್ಲಿ – ಮೆಟ್ರೋ ಹಾದಿಗಳಿಗಾಗಿ ಯೋಜನೆ ರೂಪಿಸಲು , ಕ್ರಮಬದ್ಧವಾದ ಪರೀಕ್ಷೆ ನಡೆಸಲು ಹಾಗೂ ವಿವರವಾದ ಯೋಜನಾವರದಿಯನ್ನು ತಯಾರಿಸಲು, ಡೆಲ್ಲಿ ಮೆಟ್ರೋ ಯೋಜನೆಯ ಯಶಸ್ವೀ ಯೋಜನಾ ವಿಧಾನ ಹಾಗೂ ಅನುಷ್ಠಾನವು ಕರ್ನಾಟಕ ಸರ್ಕಾರವನ್ನು ಭಾರತ ಸರ್ಕಾರ ಹಾಗೂ ದೆಹಲಿ ಸರ್ಕಾರಗಳ ಜಂಟಿ ಪ್ರಯತ್ನದ ಕಂಪನಿಯಾದ ಡೆಲ್ಲಿ ಮೆಟ್ರೋ ರೈಲ್ ಕಾರ್ಪೊರೇಷನ್ ಲಿಮಿಟೆಡ್‌ನ ಸೇವೆಯನ್ನು ಪಡೆಯಲು ಉತ್ತೇಜಿಸಿತು. (ಸೆಪ್ಟೆಂಬರ್ 2002).

- ಕರ್ನಾಟಕ ಸರ್ಕಾರವು ದಿನಾಂಕ 19.09.2002 ಹಾಗೂ 19.10.2002 ರಂದು ಎರಡೂ ಹಾದಿಗಳ ಬಗ್ಗೆ ಅನುಮತಿ ನೀಡಿತು.

- ದಿನಾಂಕ 26–05–2003 ರಂದು ಡಿ.ಎಂ.ಆರ್.ಸಿಯು ವಿವರವಾದ ಯೋಜನಾ ವರದಿಯನ್ನು ಸಲ್ಲಿಸಿತು.

- ಯೋಜನೆಯ ಅರ್ಹತೆಯನ್ನು ಹಾಗೂ ಬೆಂಗಳೂರು ನಗರದ ತ್ವರಿತ ಸಾಗಣೆ ಅಗತ್ಯತೆಯನ್ನು ಪರಿಗಣಿಸಿದ ಯೋಜನಾ ಆಯೋಗವು, ತನ್ನ ತಾತ್ವಿಕ ಒಪ್ಪಿಗೆಯನ್ನು ದಿನಾಂಕ 4 ಫೆಬ್ರವರಿ 2004 ರಂದು ನೀಡಿತು.

- ಮೆಟ್ರೋ ರೈಲು ಯೋಜನೆಯನ್ನು ಕರ್ನಾಟಕ ಸರ್ಕಾರವು ಭಾರತದ ಯೋಜನಾ ಆಯೋಗದ ಮುಂದೆ ಅದರ ತಾತ್ವಿಕ ಅನುಮೋದನೆಗಾಗಿ ಮಂಡಿಸಿತು.

- 2004ರ ಫೆಬ್ರವರಿ 28 ರಂದು ಸರ್ಕಾರವು ಮೆಟ್ರೋ ರೈಲು ಹಾದಿ ತಳನಕಾಸೆಯಲ್ಲಿ ಭೂ ಅಭಿವೃದ್ಧಿ ಹಾಗೂ ನಿರ್ಮಾಣ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ ಆದೇಶ ಹೊರಡಿಸಿತು.

- ಡಿ.ಎಂ. ಆರ್. ಸಿ.ಯಿಂದ ತಯಾರಿಸಲ್ಪಟ್ಟ ಡಿ ಪಿ ಆರ್ ಅನ್ನು ಪರಿಗಣಿಸಿದ ನಂತ ಕರ್ನಾಟಕ ಸರ್ಕಾರವು, ಭಾರತ ಸರ್ಕಾರದೊಂದಿಗಿನ ಜಂಟಿ ಪ್ರಯತ್ನವಾಗಿ ಬೆಂಗಳೂರು ಮೆಟ್ರೋ ರೈಲಿನ ಅನುಷ್ಠಾನಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು.

- ದಿನಾಂಕ 5 ಆಗಸ್ಟ್ 2005 ರಂದು ಭಾರತ ಸರ್ಕಾರದ ಸಾರ್ವಜನಿಕ ಹೂಡಿಕೆ ಮಂಡಳಿಯು ಬೆಂಗಳೂರು ಮೆಟ್ರೋ ರೈಲಿಗೆ ಸಮ್ಮತಿಸಿತು.

- ದಿನಾಂಕ 27 ಏಪ್ರಿಲ್ 2006 ರಂದು ಕೇಂದ್ರ ಮಂತ್ರಿ ಮಂಡಳವು ಈ ಯೋಜನೆಗೆ ಸಮ್ಮತಿಸಿತು.

- ದಿನಾಂಕ 11 ಮೇ 2006 ರಂದು ಭಾರತ ಸರ್ಕಾರವು ಈ ಯೋಜನೆಯನ್ನು ಅನುಮೋದಿಸಿತು.

- ಯೋಜನೆಯ ವೆಚ್ಚವು ರೂ.6395 ಕೋಟಿಗಳು. ಯೋಜನೆಯ ಅನುಷ್ಠಾನವು 5 ವರ್ಷಗಳು.

- ಭೂ ಸ್ವಾಧೀನವನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ವಹಿಸಲಾಗಿದೆ.

- ಜುಲೈ 2006ರ ವರೆಗೆ ತಿದ್ದುಪಡಿಯಾದ ಕಂಪನಿಯ ಕರಾರು ಹಾಗೂ ನಿಯಮಾವಳಿಗಳ ದಾಖಲೆ ಪ್ರತಿಯನ್ನು ಬಿ.ಎಂ.ಆರ್.ಸಿ.ಎಲ್. ಕಚೇರಿಯಿಂದ ಕೆಲಸದ ದಿನಗಳಲ್ಲಿ, ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

# ಅಧ್ಯಾಯ – 2

## ನೌಕರರ ಹಾಗೂ ಅಧಿಕಾರಿಗಳ, ಅಧಿಕಾರಗಳು ಹಾಗೂ ಕರ್ತವ್ಯಗಳು.

ಕಂಪನಿಯ ನಿರ್ದೇಶಕರುಗಳ ಅಧಿಕಾರಗಳು ಹಾಗೂ ಕರ್ತವ್ಯಗಳು ಕಾಲಕಾಲಕ್ಕೆ ಸರ್ಕಾರದಿಂದ ನೀಡಲ್ಪಡುವ ಮಾರ್ಗಸೂಚಿಗಳು, ಸೂಚನೆಗಳು ಹಾಗೂ 1966ರ ಕಂಪನಿ ಕಾಯ್ದೆಯಲ್ಲಿನ ಅನುವುಗಳು, ನಿಭಂದನೆಗಳಿಂದ ನಿಯಂತ್ರಿತವಾಗಿವೆ. ನಿರ್ದೇಶಕರುಗಳ ಮಂಡಳಿಯಿಂದ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರವನ್ನು ಸೂಕ್ತವಾಗಿ ನಿಯೋಜಿಸಲಾಗಿದೆ. ಅವಶ್ಯಕತೆಯನ್ನು ಅವಲಂಬಿಸಿ, ಆರ್ಥಿಕ ಮಿತಿಯೊಂದಿಗೆ ಅಧಿಕಾರವನ್ನು ಪ್ರತಿಯಾಗಿ, ವ್ಯವಸ್ಥಾಪಕ ನಿರ್ದೇಶಕರಿಂದ ಕಾರ್ಯನಿರ್ವಾಹಕ ನಿರ್ದೇಶಕರಿಗಿ, ಪ್ರಧಾನ ವ್ಯವಸ್ಥಾಪಕರಿಗೆ ಹಾಗೂ ಇತರೆ ವಿಭಾಗೀಯ ಮುಖ್ಯಸ್ಥರಿಗೆ ಉಪನಿಯೋಜನೆ ಮಾಡಲಾಗಿದೆ. ಕಂಪನಿಯ ಹಿರಿಯ ಅಧಿಕಾರಿಗಳ ಕರ್ತವ್ಯಗಳೂ ಸಹ ನೇಮಕಾತಿ / ನಿಯೋಜನೆಯ ನಿಬಂಧನೆ ಹಾಗೂ ಷರತ್ತುಗಳಿಗೆ ಒಳಪಟ್ಟಿರುತ್ತದೆ.

### ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಕಂಪನಿಯ ವ್ಯವಹಾರ ನಡವಳಿಕೆ ಹಾಗೂ ನೀತಿ ನಿಯಮಗಳ ಸೂತ್ರ ಸಂಗ್ರಹ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಕಂಪನಿಯು ಭಾರತ ಸರ್ಕಾರದ 11.05.2006ರ ಪತ್ರದಲ್ಲಿನ ಷರತ್ತುಗಳನ್ವಯ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಜಂಟಿ ಉದ್ಯಮವನ್ನಾಗಿ ರೂಪಿಸಲಾದ ಪರಿಣಾಮವಾಗಿ ಮಂಡಲಿಯನ್ನು ಪುನರ್ರಚಿಸಲಾಗಿದೆ. ವ್ಯವಹಾರ ನಡವಳಿಕೆ ಹಾಗೂ ನೀತಿ ನಿಯಮಗಳ ಸೂತ್ರ ಸಂಗ್ರಹವು ನೂತನ ಮಂಡಲಿಯಿಂದ ರೂಪಿಸಲ್ಪಡುವುದು.

### ಶಿಸ್ತು ಕ್ರಮಗಳು

ಕಂಪನಿಯ ಯಾವುದೇ ನೌಕರರು, ಏಜಂಟರು, ಗುತ್ತಿಗೆದಾರರು ಅಥವಾ ಸಮಾಲೋಚಕರು ಕಂಪನಿಯ ನೀತಿ ನಿಯಮಗಳನ್ನು ಉಲ್ಲಂಘಿಸಿದ್ದಾರೆಂದು ಕಂಡು ಬಂದಲ್ಲಿ ಅಂತಹವರ ವಿರುದ್ಧ ಸೂಕ್ತ ಕ್ರಮವನ್ನು ಕಂಪನಿಯಿಂದ ತೆಗೆದುಕೊಳ್ಳಲಾಗುವುದು. ಶಿಸ್ತು ಕ್ರಮವು ಕಂಪನಿಯ ವಿವೇಚನೆಯಂತೆ ನೌಕರರ ವಜಾ ಅಥವಾ ಮೇಲೆ ಹೇಳಿದ ಇನ್ನಿತರರ ವ್ಯವಹಾರ ಸಂಬಂಧವನ್ನು ಕೊನೆಗಾಣಿಸುವುದನ್ನು ಒಳಗೊಳ್ಳಬಹುದಾಗಿದೆ. ಕಂಪನಿಯು ನಷ್ಟವನ್ನು ಅನುಭವಿಸಿದ ಸಂದರ್ಭದಲ್ಲಿ ಅದಕ್ಕೆ ಕಾರಣರಾದ ವ್ಯಕ್ತಿಗಳ ಅಥವಾ ಅದಕ್ಕೆ ಸಂಬಂಧಿಸಿದ ಸಂಸ್ಥೆಗಳ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಬಹುದಾಗಿರುತ್ತೆ. ಕಾನೂನುಗಳ ಉಲ್ಲಂಘನೆಯಾದ ಸಂದರ್ಭದಲ್ಲಿ ಕಂಪನಿಯು ಸಂಬಂಧ ಪಟ್ಟ ಪ್ರಾಧಿಕಾರಗಳಿಗೆ ತನ್ನ ಸಹಕಾರವನ್ನು ಸೂಕ್ತ ಕ್ರಮ ಕೈಗೊಳ್ಳಲು ನೀಡುತ್ತದೆ.

# ಅಧ್ಯಾಯ – 3

## ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮ ವಿಧಾನ

ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಷನ್ ನಿಯಮಿತವು ಪ್ರಮುಖವಾಗಿ ಸಮೂಹ ತ್ವರಿತ ಸಾಗಣೆ ವ್ಯೂಹಗಳ ಸ್ಥಾಪನೆಯಲ್ಲಿ ನಿರತವಾಗಿದ್ದು, ನಿರ್ಧಾರಗಳನ್ನು ಕೈಗೊಳ್ಳುವ ಬಗ್ಗೆ ನಿರ್ದಿಷ್ಟವಾಗಿ ರೂಪಿಸಲಾಗಿರುವ ಕ್ರಮವಿಧಾನಗಳನ್ನು ಹೊಂದಿರುತ್ತದೆ. ಯೋಜನೆಯ ಅನುಷ್ಠಾನವನ್ನು ಕಾರ್ಯಗತಗೊಳಿಸುವ ಸಲುವಾಗಿ, ಯೋಜಿತ ರೀತಿಯಲ್ಲಿ ವೇಳಾಪಟ್ಟಿಯಂತೆ ನಡೆಸಲು, ಹಣಕಾಸಿನ ಪರಿಣಾಮಗಳನ್ನು ಹಾಗೂ ವಿಷಯ ವಸ್ತುವಿನ ಪ್ರಾಮುಖ್ಯತೆಯನ್ನು ಅವಲಂಬಿಸಿ ಕಂಪನಿಯಲ್ಲಿನ ಸೂಕ್ತ ಮಟ್ಟದಲ್ಲಿ ಪ್ರಸ್ತಾವನೆಗಳನ್ನು ಪ್ರವರ್ತನಗೊಳಿಸಲಾಗುವುದು ಮತ್ತು ಪ್ರಸ್ತಾವನೆಗಳನ್ನು ಯುಕ್ತ ಪ್ರಾಧಿಕಾರಕ್ಕೆ ಅದರ ಅನುಮೋದನೆಗಾಗಿ ಕಳುಹಿಸಲಾಗುವುದು. ಮಂಡಳಿಯ / ಸರ್ವ ಸದಸ್ಯರ ಸಭೆಗಳಲ್ಲಿ ಚಲಾಯಿಸಬಹುದಾದಂತಹ ಅಧಿಕಾರಗಳನ್ನು ಮೆಮೋರ್‍ಯಾಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಹಾಗೂ 1956 ರ ಕಂಪನಿಗಳ ಕಾಯಿದೆಯ ನಿಬಂಧನೆಗಳ ಸೂಕ್ತ ಅನುಸರಣೆಯ ರೀತ್ಯ ಚಲಾಯಿಸಲಾಗುವುದು.

ಎಲ್ಲೆಲ್ಲಿ ಅಗತ್ಯವೋ ಅಲ್ಲಿ ಹಣಕಾಸಿನ ಇಲಾಖೆಯ ಸಮ್ಮತಿಯನ್ನು ಸೂಕ್ತ ಮಟ್ಟದಲ್ಲಿ ಕಾಲಕಾಲಕ್ಕೆ ರೂಪಿಸಲಾದ ಸೂಚನೆಗಳು / ಕ್ರಮ ವಿಧಾನಗಳ ರೀತ್ಯ ತೆಗೆದುಕೊಳ್ಳಲಾಗುವುದು. ಸೂಚನೆಗಳು / ನೀತಿಗಳ ಮೇರೆಗೆ ಸಮರ್ಪಕವಾಗಿ ನಡೆದುಕೊಳ್ಳಲಾಗಿದೆ ಎಂದು ದೃಢಪಡಿಸಿಕೊಂಡ ನಂತರವೇ ಪ್ರಸ್ತಾವನೆಗಳನ್ನು ಯುಕ್ತ ಪ್ರಾಧಿಕಾರದ ಅನುಮತಿಗಾಗಿ ಸಲ್ಲಿಸಲಾಗುವುದು. ಸಮ್ಮತಿಯನ್ನು ಅಧಿಕಾರ ನಿಯೋಜನೆಯಂತೆ ಕಾರ್ಯನಿರ್ವಾಹಕರುಗಳು ವ್ಯವಸ್ಥಾಪಕ ನಿರ್ದೇಶಕರ ಮಟ್ಟದವರೆಗೂ ಸೂಕ್ತ ಮಟ್ಟದಲ್ಲಿ ನೀಡುವರು. ವ್ಯವಸ್ಥಾಪಕ ನಿರ್ದೇಶಕರಿಗೆ ನಿಯೋಜಿಸಲಾಗಿರುವ ಅಧಿಕಾರವನ್ನು ಮೀರಿದ ವಿಷಯಗಳ ಬಗ್ಗೆ ನಿರ್ದೇಶಕರುಗಳ ಮಂಡಲಿಯು ಅನುಮೋದಿಸುವುದು.

# ಅಧ್ಯಾಯ – 4

## ತನ್ನ ಕಾರ್ಯ ಚಟುವಟಿಕೆಯ ನೆರವೇರಿಕೆಗಾಗಿ ಗೊತ್ತುಪಡಿಸಲಾದ ಮಾದರಿ ನಡೆವಳಿಕೆಗಳು

ಬೆಂಗಳೂರಿನಲ್ಲಿ ಸಮೂಹ ತ್ವರಿತ ಸಾಗಣೆ ವ್ಯವಸ್ಥೆಗೆ ಪರಿಹಾರಗಳನ್ನು ಒದಗಿಸುವುದಕ್ಕಾಗಿ ಕಂಪನಿಯನ್ನು ಸ್ಥಾಪಿಸಲಾಯಿತು.

ಯೋಜನೆಯ ಅನುಷ್ಠಾನಕ್ಕೆ ಕರ್ನಾಟಕ ಸರ್ಕಾರದಿಂದ ಮಾರ್ಚ್ 2005ರಲ್ಲಿ ಒಪ್ಪಿಗೆಯು ದೊರೆಯಿತು. 2005 ರ ಆಗಸ್ಟ್‌ನಲ್ಲಿ ಸಾರ್ವಜನಿಕ ಬಂಡವಾಳ ಹೂಡಿಕೆ ಮಂಡಳಿಯು, ಈ ಯೋಜನೆಗೆ ಸಮ್ಮತಿಯನ್ನು ಸೂಚಿಸಿದೆ. ಭಾರತ ಸರ್ಕಾರವು ಮೇ 2006 ರಂದು ಈ ಯೋಜನೆಯನ್ನು 6395 ರೂ ಕೋಟಿಗಳ ವೆಚ್ಚದೊಂದಿಗೆ ಅನುಮೋದಿಸಿದೆ.

# ಅಧ್ಯಾಯ – 5

**ಕಾರ್ಯ ಚಟುವಟಿಕೆಗಳ ನೆರವೇರಿಕೆಗಾಗಿ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಹಾಗೂ ದಾಖಲೆಗಳು**

ಕಂಪನಿಯ ಒಟ್ಟಾರೆ ಧ್ಯೇಯ ಹಾಗೂ ನಿಯಮ ಮತ್ತು ನಿಬಂಧನೆಗಳ ಹಂದರವನ್ನು ಕಂಪನಿಯ ಮೆಮೋರ್‍ಯಾಂಡಂ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಲ್ಲಿ ನಿರೂಪಿಸಲಾಗಿದೆ. ಕಂಪನಿಯ ಕಾರ್ಯಚಟುವಟಿಕೆಗಳನ್ನು ನೆರವೇರಿಸುವಾಗ ಕಂಪನಿ ಕಾಯ್ದೆ 1956ರ ನಿಯಮಗಳ ಹಾಗೂ ಕಟ್ಟುಪಾಡುಗಳ ಅನುಸರಣೆಯನ್ನು ಧೃಡೀಕರಿಸಿಕೊಳ್ಳಲಾಗುವುದು. ಕಂಪನಿಯು ಪ್ರತಿಯೊಂದು ವಿಭಾಗವು ತನ್ನ ಕಾರ್ಯಾಚರಣೆಯಲ್ಲಿ ಕಾಲಕಾಲಕ್ಕೆ ಪುನರ್ವಿಮರ್ಶಿತವಾಗುವ ಹಾಗೂ ಇಂದಿನ ತನಕ ನವೀಕರಿಸಿದ ನೀತಿ ಸೂಚನೆಗಳು ಮಾರ್ಗಸೂಚಿಗಳಿಂದ ಮಾರ್ಗದರ್ಶಿತವಾಗಿದೆ. ನೌಕರರ ವರ್ತನೆಯು ನೇಮಕಾತಿಯ ಷರತ್ತು ಹಾಗೂ ನಿಬಂದನೆಗಳಿಂದ ನಿಯಂತ್ರಿತವಾಗಿದೆ.

ಕಂಪನಿಯು ತನ್ನ ಸರಾಗ ಕಾರ್ಯ ಚಟುವಟಿಕೆಗಳಿಗಾಗಿ ಸಿಬ್ಬಂಧಿ ನೀತಿ / ಮಾರ್ಗಸೂಚಿಗಳು / ನಿಯಮಗಳು / ಕ್ರಮವಿಧಾನಗಳು / ಕರಾರಿನ ನಿಬಂದನೆಗಳು ಹಾಗೂ ಷರತ್ತುಗಳು ಟೆಂಡರ್ ದಸ್ತಾವೈಜುಗಳು ಇತ್ಯಾದಿಗಳಲ್ಲಿನ ಒಪ್ಪಂಧಗಳು. ನಿಯಮಗಳು ಹಾಗೂ ನಿಬಂದನೆಗಳ ಪಾಲನೆಗೆ ಅಗತ್ಯವಾದ, ಕಂಪನಿಯ ವಿವಿಧ ಕಾಯಿದೆ ದಸ್ತಾವೈಜುಗಳು, ನೋಂದಣಿ ಪುಸ್ತಕಗಳು, ಪುಸ್ತಕಗಳು ಪರವಾನನಿಗಳು, ಕೈಪಿಡಿಗಳು, ಒಪ್ಪಂದಗಳು ಇತ್ಯಾದಿಗಳನ್ನು ಕಂಪನಿಯಲ್ಲಿ ವ್ಯವಸ್ಥೆ ಮಾಡಲಾಗಿದೆ.

ಯೋಜನಾ ಅನುಷ್ಠಾನದ ತಪಶೀಲಿನಂತೆ ವಿವರವಾದ ಕೈಪಿಡಿಗಳು, ನಿಯಮಗಳು ಹಾಗೂ ನಿಭಂದನೆಗಳ ತಯಾರಿಕೆಯ ಪ್ರಕ್ರಿಯೆಯಲ್ಲಿ ಕಂಪನಿಯು ನಿರತವಾಗಿದೆ.

## ಅಧ್ಯಾಯ – 6

### ಕಂಪನಿಯಲ್ಲಿ ಅಧೀನದಲ್ಲಿರುವ ಮತ್ತು ಕಂಪನಿಯ ನಿಯಂತ್ರಣದಲ್ಲಿ ವಿವಿಧ ದಸ್ತಾ ವೈಜುಗಳ ವಿವರ

| ಕ್ರಮ. ಸಂಖ್ಯೆ. | ದಸ್ತಾ ವೇಜುಗಳ ವಿವರ | ದಸ್ತಾ ವೈಜಿನ ಹೆಸರು ಹಾಗೂ ಒಂದೇ ಸಾಲಿನಲ್ಲಿ ಅದರ ಪರಿಚಯ | ದಸ್ತಾ ವೇಜನ್ನು ಪಡೆದುಕೊಳ್ಳುವ ವಿಧಾನ | ಯಾರ ನಿಯಂತ್ರಣದಲ್ಲಿದೆ |
|---|---|---|---|---|
| 1. | | | ಈ ಬಗ್ಗೆ ಕಂಪನಿಯು ಪ್ರಕಟಿಸಿರುವ ಮಾಹಿತಿಯನ್ನು ಬಯಸುವ ಸಲುವಾಗಿನ ಕ್ರಮವಿಧಾನವನ್ನು ದಯವಿಟ್ಟು ನೋಡಿ. | |
| 2. | ಕಾಯಿದೆ ರೀತ್ಯದಂತೆ | ನಿರ್ದೇಶಕರುಗಳ ಬಗ್ಗೆ ರಿಜಿಸ್ಟರುಗಳು | | ಕಂಪನಿ ಕಾರ್ಯದರ್ಶಿಗಳು |
| 3. | ಸಾಮಾನ್ಯ ಮೊಹರಿನ ದಾಖಲೆ ಪುಸ್ತಕ | | | ಕಂಪನಿ ಕಾರ್ಯದರ್ಶಿಗಳು |
| 4. | ಕರ್ತವ್ಯ ಹೊಣೆಗಾರಿಕೆಗಳ ದಾಖಲೆ ಪುಸ್ತಕ | | | ಕಂಪನಿ ಕಾರ್ಯದರ್ಶಿಗಳು |
| 5. | ಹೂಡಿಕೆಗಳ ದಾಖಲೆ ಪುಸ್ತಕ | | | ಕಂಪನಿ ಕಾರ್ಯದರ್ಶಿಗಳು |
| 6. | ಮಂಡಲಿ ಸಭೆಯ ಹಾಗೂ ಎ.ಜಿ.ಎಂ.ನ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | | ಸಾರ್ವಜನಿಕರ ಅವಗಾಹನೆಗೆ ಮತ್ತು ಸಾರ್ವಜನಿಕರಿಗೆ ಪ್ರತಿಗಳನ್ನು ನೀಡಲಾಗುವುದಿಲ್ಲ. | ಕಂಪನಿ ಕಾರ್ಯದರ್ಶಿಗಳು |
| 7. | ಮೆಮೋರ್‍ಯಾಂಡಂ ಹಾಗೂ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ | | | ಕಂಪನಿ ಕಾರ್ಯದರ್ಶಿಗಳು |
| 8. | ಕಂಪನಿಯ ಕಾನೂನು ಬದ್ಧ ರಚನೆಯ ಪ್ರಮಾಣ ಪತ್ರ | | | ಕಂಪನಿ ಕಾರ್ಯದರ್ಶಿಗಳು |
| 9. | ಕಂಪನಿಯ ಟ್ರೇಡ್ ಮಾರ್ಕ್ ಯಾವುದಾದರೂ ಇದ್ದಲ್ಲಿ | | | ಕಂಪನಿ ಕಾರ್ಯದರ್ಶಿಗಳು |
| 10. | ಅಧಿಕಾರ ನಿಯೋಜನೆ | | | |
| 11. | ಲೈಸೆನ್ಸ್, ಸಿ.ಎಸ್.ಟಿ / (ವ್ಯಾಟ್) ರೆಜಿಷ್ಟ್ರೇಷನ್ | | | ಹಣಕಾಸು ಶಾಖೆ |
| 12. | ವಾರ್ಷಿಕ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವರದಿಗಳು | | | ಹಣಕಾಸು ಶಾಖೆ |

# ಅಧ್ಯಾಯ –7

**ಕಂಪನಿಯ ನೀತಿ ಅಥವಾ ಅನುಷ್ಠಾನದ ನಿರೂಪಣೆಗೆ ಸಂಬಂಧಿಸಿದಂತೆ ಸಾರ್ವಜನಿಕ ಸದಸ್ಯರಿಂದ ಅಥವಾ ಅವರೊಂದಿಗೆ ಅಥವಾ ಅವರ ಪ್ರಾತಿನಿಧ್ಯದ ಮೂಲಕ ಸಮಾಲೋಚನೆಗಾಗಿ ಇರುವ ಯಾವುದೇ ವ್ಯವಸ್ಥೆಗಳ ವಿವರಗಳು:**

ಪ್ರಸ್ತುತ – ಯಾವುದೂ ಇಲ್ಲ.

# ಅಧ್ಯಾಯ – 8

**ಬಿ.ಎಂ.ಆರ್.ಸಿ.ಎಲ್.ನ ಭಾಗವಾಗಿ ರಚಿತವಾಗಿರುವ ಮಂಡಳಿಗಳ, ಪರಿಷತ್ತು, ಸಮಿತಿಗಳು ಹಾಗೂ ಇತ್ಯಾದಿಗಳ ತಃಖ್ತೆ ಬಿ.ಎಂ.ಆರ್.ಸಿ.ಎಲ್.ನಲ್ಲಿ ಹಾಲಿ ಇರುವ ಮಂಡಲಿಗಳ /ಸಮಿತಿಗಳ ಪಟ್ಟಿ.**

## 1. ನಿರ್ದೇಶಕರುಗಳ ಮಂಡಳಿ

ನಿರ್ದೇಶಕರುಗಳ ಮಂಡಲಿಯು ಅಧ್ಯಕ್ಷ / ಅಧ್ಯಕ್ಷಿಣಿ , ವ್ಯವಸ್ಥಾಪಕ ನಿರ್ದೇಶಕ, ನಿರ್ದೇಶಕರು ಹಾಗೂ ಅರೆಕಾಲಿಕ ನಿರ್ದೇಶಕರುಗಳನ್ನು ಒಳಗೊಂಡಿದೆ. ಕಾಯಿದೆಯ ಅಗತ್ಯತೆಯಂತೆ ಮಂಡಳಿಯ ಸಭೆಗಳು ಸಾಮಾನ್ಯವಾಗಿ ಮೂರು ತಿಂಗಳಿಗೊಮ್ಮೆ ಜರುಗುವುದು. ಮಂಡಲಿಯ ಸಭೆಯ ಕಾರ್ಯಕಲಾಪದ ವರದಿಗಳು ಸಾರ್ವಜನಿಕರಿಗಾಗಿ ಇರುವುದಿಲ್ಲ ಮತ್ತು ಅವುಗಳ ಪ್ರತಿಗಳನ್ನು ಒದಗಿಸಲಾಗುವುದಿಲ್ಲ.

ಪ್ರಸ್ತುತ, ಮಂಡಳಿಯಲ್ಲಿ ಯಾವುದೇ ಉಪಸಮಿತಿಗಳು ರಚಿತವಾಗಿರುವುದಿಲ್ಲ. ಕಂಪನಿಯ ನಿಬಂದನೆಗಳ (ಆರ್ಟಿಕಲ್ಸ್ ಆಫ್ ಅಸೋಸಿಯೇಷನ್) ರೀತ್ಯ ನಿರ್ದೇಶಕರುಗಳ ಮಂಡಳಿಯು, ಕಾಲ ಕಾಲಕ್ಕೆ, ನಿರ್ದೇಶಕರುಗಳ ಆಯ್ಕೆ, ಅಧಿಕಾರಗಳ ಪರಿಗಣಿತ ನಿಯೋಜನೆಗಳು ಹಾಗೂ ಅಧಿಕಾರಿಗಳ ಆಯ್ಕೆ ಇಂತಹ ವಿವಿಧ ವಿಷಯಗಳಿಗಾಗಿ ಒಂದು ಉಪಸಮಿತಿಯನ್ನು ರಚಿಸಬಹುದಾಗಿದೆ.

ಪ್ರಸ್ತುತ ಮಂಡಳಿಯ ರಚನೆಯನ್ನು ಇದಕ್ಕೆ ಲಗತ್ತಿಸಿದೆ.

## 2. ಲೆಕ್ಕ ಪರಿಶೋಧನಾ ಸಮಿತಿ

ಪ್ರಸ್ತುತ ಲೆಕ್ಕ ಪರಿಶೋಧನಾ ಸಮಿತಿಯನ್ನು ರಚಿಸುವ ಅಗತ್ಯತೆಯು ಕಂಪನಿಗೆ ಇರುವುದಿಲ್ಲ.

## 3. ಷೇರು ಹಾಗೂ ಬಾಂಡುಗಳ ವರ್ಗಾವಣೆ ಸಮಿತಿ

ಎಲ್ಲಾ ಷೇರುಗಳು ಹಾಗೂ ಬಾಂಡುಗಳು ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರದ ವಶದಲ್ಲಿದೆ. ಆದಕಾರಣ, ಷೇರುಗಳ ವರ್ಗಾವ್ಣೆ ಕುರಿತು ಯಾವುದೇ ಉಪಸಮಿತಿಯನ್ನು ರಚಿಸುವ ಅಗತ್ಯವಿರುವುದಿಲ್ಲ.

## 4. ಹೂಡಿಕೆದಾರರ ಕುಂದುಕೊರತೆಗಳ ಸಮಿತಿ

ಅನ್ವಯಿಸುವುದಿಲ್ಲ.

## ಮಂಡಳಿಯ ನಿರ್ದೇಶಕರುಗಳು

1. ಶ್ರೀ. ಎಂ. ರಾಮಚಂದ್ರನ್
   ಕಾರ್ಯದರ್ಶಿ,
   ನಗರಾಭಿವೃದ್ಧಿ ಸಚಿವಾಲಯ,
   ಭಾರತ ಸರ್ಕಾರ,
   ಅಧ್ಯಕ್ಷರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ,
   ನಿರ್ಮಾಣ್ ಭವನ್.
   ನವ ದೆಹಲಿ – 110 001.

2. ಶ್ರೀ. ಎ.ಎನ್.ಪಿ. ಸಿನ್ಹ,
   ಪ್ರಧಾನ ಸಲಹೆಗಾರರು (ನಗರಾಭಿವದ್ಧಿ)/ ಯೋಜನಾ ಮಂಡಳಿ,
   ನಿರ್ದೇಶಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ,
   ನಂ132, ಯೋಜನಾ ಭವನ,
   ಸಂಸದ್ ಮಾರ್ಗ್,
   ನವ ದೆಹಲಿ – 110 001.

3. ಶ್ರೀ. ಅನಿಲ್‌ಬೈಜಲ್
   ಭಾರತ ಸರ್ಕಾರದ ಕಾರ್ಯದರ್ಶಿಗಳು (ನಿವೃತ್ತ),
   ನಂ. 10, ಲೋಧಿ ಎಸ್ಟೇಟ್,
   ನವ ದೆಹಲಿ – 110 003.

4. ಶ್ರೀ. ಸತೀಶ್ ಕುಮಾರ್
   ನಿರ್ದೇಶಕರು (ರೋಲಿಂಗ್ ಸ್ಟಾಕ್, ವಿದ್ಯುತ್ ಮತ್ತು ಎಸ್. ಮತ್ತು ಟಿ)
   ಡೆಲ್ಲಿ ಮೆಟ್ರೋ ರೈಲು ನಿಗಮ ನಿಯಮಿತ,
   ಎನ್.ಬಿ.ಸಿ.ಸಿ. ಪ್ಯಾಲೇಸ್, ಭೀಷ್ಮ ಪಿತಾಮಹ ಮಾರ್ಗ್,
   ಪ್ರಗತಿ ವಿಹಾರ್,
   ನವ ದೆಹಲಿ – 100 003.

5. ಶ್ರೀ. ಎಸ್. ಕೆ ಲೋಹಿಯ
   ನಿರ್ದೇಶಕರು (ನಗರ ಸಂಚಾರ ಸಾರಿಗೆ ವ್ಯವಸ್ಥೆ),
   ಭಾರತ ಸರ್ಕಾರ,
   ನಿರ್ದೇಶಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ,
   ನಿರ್ಮಾಣ್ ಭವನ್.
   ನವ ದೆಹಲಿ – 110 001.

6. ಶ್ರೀ. ಸುಧಾಕರ್ ರಾವ್,
   ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು,
   ಕರ್ನಾಟಕ ಸರ್ಕಾರ,
   ವಿಧಾನ ಸೌಧ,
   ಬೆಂಗಳೂರು – 560 001.

7. ಶ್ರೀ. ಎನ್. ಗೋಕುಲ್ ರಾಂ,
ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ಹಣಕಾಸು ಇಲಾಖೆ,
ವಿಧಾನ ಸೌಧ,
ಬೆಂಗಳೂರು – 560 001.

8. ಶ್ರೀ. ಕೆ. ಜೈರಾಜ್, ಐ.ಎ.ಎಸ್,
ಕಮೀಷನರ್,
ಬೆಂಗಳೂರು ಮಹಾನಗರ ಪಾಲಿಕೆ,
ಎನ್. ಆರ್. ಚೌಕ,
ಬೆಂಗಳೂರು – 560 002.

9. ಶ್ರೀಮತಿ. ಲಕ್ಷ್ಮಿ ವೆಂಕಟಾಚಲಂ, ಐ.ಎ.ಎಸ್.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದಿ ಇಲಾಖೆ,
ವಿಕಾಸ ಸೌಧ, 4ನೇ ಮಹಡಿ,
ಬೆಂಗಳೂರು – 560 001.

10. ಶ್ರೀ. ವಿ. ಮಧು, ಐ.ಎ.ಎಸ್.,
ವ್ಯವಸ್ಥಾಪಕ ನಿರ್ದೇಶಕರು,
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ,
ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್,
ಕೆ. ಹೆಚ್, ರಸ್ತೆ, ಶಾಂತಿನಗರ,
ಬೆಂಗಳೂರು – 560 027.

11. ಶ್ರೀ. ಬಿ.ಎಸ್. ಸುಧೀರ್ ಚಂದ್ರ,
ನಿರ್ದೇಶಕರು (ಪ್ರಾಜೆಕ್ಟ್ ಅಂಡ್ ಪ್ಲಾನಿಂಗ್)
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ,
ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್,
ಕೆ. ಹೆಚ್, ರಸ್ತೆ, ಶಾಂತಿನಗರ,
ಬೆಂಗಳೂರು – 560 027.

# ಅಧ್ಯಾಯ – 9

## ಅಧಿಕಾರಿಗಳ ಕಛೇರಿ ದೂರವಾಣಿ ಸಂಖ್ಯೆಗಳ ನಿರ್ದೇಶಿಕೆ

## ದೂ.ಸಂ. 22969300, 22969301 (ಸಾಮಾನ್ಯ), ಫ್ಯಾಕ್ಸ್: 22969222

| ಕ್ರ. ಸಂ. | ಹೆಸರು (ಶ್ರೀಯುತರು) | ಪದನಾಮ | ಕಛೇರಿ ದೂ. ಸಂ. |
|---|---|---|---|
| 1. | ವಿ. ಮಧು | ವ್ಯ. ನಿ | 22969202 |
| 2. | ಬಿ.ಎಸ್. ಸುಧೀರ್ ಚಂದ್ರ | ನಿ (ಪಿ ಮತ್ತು ಪಿ) | 22969206 |
| 3. | ಸಂದೀಪ್ ದಾಶ್ | ಕಾ.ನಿ (ಹ) | 22969387 |
| 4. | ಎಂ. ಎಸ್. ನಾಗೇಂದ್ರ | ಕಾ.ನಿ (ಆ) | 22969381 |
| 5. | ಬಿ.ಎನ್. ಯಶವಂತ್ ಚವಾಣ್ | ಅ.ಇಂ. (ವಿ) | 22969255 |
| 6. | ಎಸ್. ಕಿನ್ನಿ | ಕಾ.ಇಂ. (ಸಿವಿಲ್) | 22969352 |
| 7. | ಆರ್.ಕೆ. ರವಿಶಂಕರ್ | ಕಂ.ಕಾ ಮತ್ತು ಪ್ರ.ವ್ಯ (ಹ) | 22969251 |
| 8. | ಕೆ.ಎಂ. ಚಂದ್ರೇಗೌಡ | ಸ.ಕ (ಭೂಸ್ವಾದೀನ) | 22969232 |
| 9. | ವಿ.ಕೆ. ದ್ವಾರಕನಾಥ್ | ಕಾನೂನು ಅಧಿಕಾರಿ | 22969389 |
| 10. | ಸೋಮಶೇಖರ್ | ಕಾ.ಇಂ (ಸಿವಿಲ್) | 22969389 |
| 11. | ಸೈಯದ್ ಝುಬೇರ್ ಅಹಮದ್ | ಸ.ಕಾ.ಇಂ (ವಿ) | 22969211 |
| 12. | ಬಿ. ಕೃಷ್ಣಮೂರ್ತಿ | ಸ.ಕಾ.ಇಂ (ವಿ) | 22969304 |
| 13. | ವೀರಭದ್ರರೆಡ್ಡಿ | ವ್ಯ.ನಿ ರವರ ಆ.ಕಾ | 22969202 |
| 14. | ಜಿ.ಎಸ್. ಶೈಲೇಶ್ | ಮ್ಯಾನೇಜರ್(ಐ.ಟಿ) | 22969390 |

# ಅಧ್ಯಾಯ – 10

## ಅಧಿಕಾರಿಗಳು ಹಾಗೂ ಕೆಲಸಗಾರರು ನೇಮಕಾತಿಯ ಷರತ್ತು ಹಾಗೂ ನಿಬಂಧನೆಗಳಂತೆ ಪರಿಹಾರ ಪದ್ಧತಿಯೂ ಸೇರಿದಂತೆ ಪಡೆಯುವ ಮಾಸಿಕ ಸಂಭಾವನೆ (ವೇತನ).

ಯೋಜನೆಯು ಅನುಷ್ಠಾನ ಹಂತದಲ್ಲಿರುವುದರಿಂದ ಮೇಲಿನಂತೆ ಯಾವುದೇ ನೇಮಕಾತಿಯಾಗಿಲ್ಲ ಹಾಗೂ ಕಂಪನಿಯ ಪಾಲಿಸಿ (ನೀತಿ) ಯಂತೆ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ನಿಯೋಜನೆ / ಗುತ್ತಿಗೆ ಮೇಲೆ ತೆಗೆದುಕೊಳ್ಳಲಾಗುವುದು.

ಸಂಭಾವನೆ (ಅಥವಾ ವೇತನ) ವನ್ನು ನಿಯೋಜನೆ / ಗುತ್ತಿಗೆಯ ಷರತ್ತು ಹಾಗೂ ನಿಬಂಧನೆಗಳಂತೆ ಪಾವತಿಸಲಾಗುವುದು ವಿವರಗಳನ್ನು ಈ ಕೆಳಕಂಡ ಅನುಬಂಧದಲ್ಲಿ ನೀಡಿದೆ.

**ಅನುಬಂಧ**

| ಕ್ರ. ಸಂ. | ಹೆಸರು (ಶ್ರೀಯುತರು) | ಪದನಾಮ | ವೇತನ | ಷರಾ |
|---|---|---|---|---|
| 1. | ವಿ. ಮಧು | ವ್ಯ. ನಿ | 53221 | ಕ. ಸರ್ಕಾರದಿಂದ ನಿಯೋಜನೆ |
| 2. | ಬಿ.ಎಸ್. ಸುಧೀರ್ ಚಂದ್ರ | ನಿ (ಪಿ ಮತ್ತು ಪಿ) | 55237 | ಗುತ್ತಿಗೆ |
| 3. | ಸಂದೀಪ್ ದಾಶ್ | ಕಾ.ನಿ (ಹ) | 39013 | ಭಾ. ಸರ್ಕಾರದಿಂದ ನಿಯೋಜನೆ |
| 4. | ಎಂ. ಎಸ್. ನಾಗೇಂದ್ರ | ಕಾ.ನಿ (ಆ) | 31903 | ಕ. ಸರ್ಕಾರದಿಂದ ನಿಯೋಜನೆ |
| 5. | ಕೆ.ಎಂ. ಚಂದ್ರೇಗೌಡ | ಸ.ಕ (ಭೂಸ್ವಾಧೀನ) | | ಕ. ಸರ್ಕಾರದಿಂದ ನಿಯೋಜನೆ (ಫೆ. 2007ರಿಂದ) |
| 6. | ಬಿ.ಎನ್. ಯಶವಂತ್ ಚವಾಣ್ | ಅ.ಇಂ. (ವಿ) | 34101 | ಕೆ.ಪಿ.ಟಿ.ಸಿ.ಎಲ್ ನಿಂದ ನಿಯೋಜನೆ |
| 7. | ಸೈಯದ್ ಜುಬೇರ್ ಅಹಮದ್ | ಸ.ಕಾ.ಇಂ (ವಿ) | 35173 | ಕೆ.ಪಿ.ಟಿ.ಸಿ.ಎಲ್ ನಿಂದ ನಿಯೋಜನೆ |
| 8. | ಆರ್.ಕೆ. ರವಿಶಂಕರ್ | ಕಂ.ಕಾ ಮತ್ತು ಪ್ರ.ವ್ಯ (ಹ) | 32000 | ಗುತ್ತಿಗೆ |
| 9. | ಎಸ್. ಕಿನ್ನಿ | ಕಾ.ಇಂ. (ಸಿವಿಲ್) | 27277 | ಕ. ಸರ್ಕಾರದಿಂದ ನಿಯೋಜನೆ |
| 10. | ಸೋಮಶೇಖರ್ | ಕಾ.ಇಂ (ಸಿವಿಲ್) | 27000 | ಗುತ್ತಿಗೆ |
| 11. | ಬಿ. ಕೃಷ್ಣಮೂರ್ತಿ | ಸ.ಕಾ.ಇಂ (ವಿ) | 25170 | ಕೆ.ಪಿ.ಟಿ.ಸಿ.ಎಲ್ ನಿಂದ ನಿಯೋಜನೆ |
| 12. | ವೀರಭದ್ರರೆಡ್ಡಿ | ವ್ಯನಿ ರವರ ಆ.ಕಾ | 26079 | ಎಂ.ಪಿ.ಎಂ ನಿಂದ ನಿಯೋಜನೆ |
| 13. | ಜಿ.ಎಸ್. ಶೈಲೇಶ್ | ಮ್ಯಾನೇಜರ್(ಐ.ಟಿ) | 21500 | ಗುತ್ತಿಗೆ |
| 14. | ವಿ.ಕೆ. ದ್ವಾರಕನಾಥ್ | ಕಾನೂನು ಅಧಿಕಾರಿ | 15000 | ಗುತ್ತಿಗೆ |

## ಅಧ್ಯಾಯ – 11

**ಪ್ರತಿಯೊಂದು ಏಜನ್ಸಿಗೂ, ಎಲ್ಲ ಯೋಜನೆಗಳ ವಿವರಗಳನ್ನೂ  ಉದ್ದೇಶಿತ ವೆಚ್ಚಗಳನ್ನು ಹಾಗೂ ವಿನಿಯೋಗ ಮಾಡಿದ ಬಗ್ಗೆ ವರದಿಯನ್ನು ಸೂಚಿಸಿ ಹಂಚಿಕೆ ಮಾಡಲಾದ ಆಯವ್ಯಯ ಯೋಜನೆ:**

ಭಾರತ ಸರ್ಕಾರದಿಂದ ಈ ಯೋಜನೆಯು ಅನುಮೋದಿತವಾಗಿದೆ.

## ಅಧ್ಯಾಯ – 12

**ಸಹಾಯಧನ ಕಾರ್ಯಕ್ರಮಗಳ ನಿರ್ವಹಣೆಯ ವಿಧಾನ – ಹಂಚಿಕೆಯಾದ ಮೊತ್ತ ಹಾಗೂ ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರವೂ ಸೇರಿದಂತೆ**

ಕಂಪನಿಗೆ ಯಾವುದೇ ಸಹಾಯಧನ, ಕಾರ್ಯಕ್ರಮಗಳ ನಿರ್ವಹಣೆಯನ್ನು ಕಂಪನಿಗೆ ವಹಿಸಿಕೊಟ್ಟಿರುವುದಿಲ್ಲ.

## ಅಧ್ಯಾಯ – 13

**ಕಂಪನಿಯಿಂದ ನೀಡಲ್ಪಟ್ಟ ರಿಯಾಯಿತಿಗಳ, ಪರವಾನಗಿಗಳ (ಪರ್ಮಿಟ್‌ಗಳ) ಅಥವಾ ಅಧಿಕಾರ ನೀಡಿಕೆಗಳ ವಿವರಗಳು:**

ಪ್ರಸ್ತುತ ಇದು ಅನ್ವಯಿಸುವುದಿಲ್ಲ.

## ಅಧ್ಯಾಯ – 14

**ಎಲೆಕ್ಟ್ರಾನಿಕ್ ರೂಪದಲ್ಲಿ ಕಂಪನಿಯು ಹೊಂದಿರುವ ಹಾಗೂ ಬೇಕಾದ ಮಾಹಿತಿಗಳು, ಇವುಗಳ ವಿವರಗಳು.**

ಈ ಕೆಳಕಂಡ ವಿವರಗಳು ಎಲೆಕ್ಟ್ರಾನಿಕ್ ರೂಪದಲ್ಲಿ ದೊರೆಯುವುವು.

1) ಕಂಪನಿಯ ಬಗ್ಗೆ ಮಾಹಿತಿ
2) ಯೋಜನೆಯ ಪ್ರಮುಖಾಂಶಗಳು
3) ಪರಿಸರ ಪರಿಣಾಮ ಅಂದಾಜಿಗೆ ವರದಿಯ ಕಾರ್ಯಗತ ಸಾರಾಂಶ
4) ಪ್ರಕಟಿಸಲಾದ / ಕರೆಯಲಾದ ಟೆಂಡರುಗಳು

# ಅಧ್ಯಾಯ – 15

**ಸಾರ್ವಜನಿಕರಿಗೆ ಮಾಹಿತಿಯ ಸಾಧನಗಳನ್ನೂ, ವಿಧಾನ ಅಥವಾ ದೊರಕುವ ಸೌಲಭ್ಯಗಳನ್ನು ಪಡೆದುಕೊಳ್ಳಲು ಮಾಹಿತಿ ಪ್ರಸರಣ ಇಲಾಖೆಯಿಂದ ಪರಿಗ್ರಹಿತವಾದ ನಾಗರೀಕರಿಗೆ ದೊರೆಯುವ ಸೌಲಭ್ಯಗಳ ವಿವರಗಳು.**

| | | | |
|---|---|---|---|
| 1. | ವೃತ್ತ ಪತ್ರಿಕೆಗಳ ಮೂಲಕ | : | ಅಧಿಸೂಚನೆಗಳು / ಯೋಜನೆಯ ಅನುಷ್ಠಾನದಲ್ಲಿ ಆಗುವ ಪ್ರಗತಿಯ ಬಗ್ಗೆ ಮಾಹಿತಿ, ಟೆಂಡರುಗಳು, ತಿಳಿವಳಿಕೆಗಳು, ನೇಮಕಾತಿ ಜಾಹಿರಾತುಗಳು ಇತ್ಯಾದಿಗಳನ್ನು ಪ್ರಮುಖವಾಗಿ ಪ್ರಕಟಿಸಲಾಗುವುದು. |
| 2. | ಟೆಂಡರುಗಳು | : | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯಿದೆಯಲ್ಲಿನ ಅನುವುಗಳ ರೀತ್ಯ ಟೆಂಡರ್ ಅಧಿಸೂಚನೆಗಳನ್ನು ರಾಜ್ಯ ಬುಲೆಟಿನ್‌ನಲ್ಲಿಯೂ ಸಹ ಪ್ರಕಟಿಸಲಾಗುವುದು. |
| 3. | ಕಛೇರಿಯಲ್ಲಿನ ದಾಖಲೆಗಳ ಅಧಿಕೃತ ಪರಿಶೀಲನೆ | : | ಕಂಪನಿಗಳ ಕಾಯಿದೆ 1956 ರ ರೀತ್ಯ ಅಗತ್ಯವಾದ ಕಾಯಿದೆ ಬದ್ಧ ನೋಂದಾಯಿತ ಪ್ರಕಟಣೆಗಳು ಅಧಿಕೃತ ಪರಿಶೀಲನೆಗಾಗಿ ಲಭ್ಯವಾಗುವುವು. ವಾರ್ಷಿಕ ಸರ್ವ ಸದಸ್ಯರ ಹಾಗೂ ಮಂಡಳಿಯ ಹಾಗೂ ಉಪ ಸಮಿತಿಯೂ ಸೇರಿದಂತೆ ಯಾವುದೇ ಸಭೆಯ ಕಾರ್ಯಕಲಾಪಗಳ ವರದಿಗಳ ಪ್ರತಿಗಳು ಪರಿಶೀಲನೆಗಾಗಿ ದೊರಕುವುದಿಲ್ಲ ಹಾಗೂ ಅವುಗಳ ಪ್ರತಿಗಳನ್ನು ಒದಗಿಸಲಾಗುವುದಿಲ್ಲ. |
| 4. | ಸಾರ್ವಜನಿಕ ಪ್ರಾಧಿಕಾರದ ವೆಬ್‌ಸೈಟ್ | : | ಕಂಪನಿಯ ಸಂಘಟನೆ, ಸೇವೆಗಳು, ಯೋಜನಾ ಚಿತ್ರಣ, ಕಾಯಿದೆ ಮಾಹಿತಿಗಳು, ಟೆಂಡರ್ ಸೂಚನೆಗಳು ನೇಮಕಾತಿ ಸೂಚನೆಗಳು ಇತ್ಯಾದಿ ಕಂಪನಿಯ ವಿವರಗಳನ್ನು ನೀಡುವ ಕಂಪನಿಯ ವೆಬ್‌ಸೈಟ್ www.bmrc.co.in ವನ್ನು ವ್ಯವಸ್ಥೆಮಾಡಲಾಗಿದೆ. |
| 5. | ಜಾಹಿರಾತಿನ ಇನ್ನಿತರ ಸಾಧನಗಳು | : | ವಿವಿಧ ಪ್ರಾಧಿಕಾರಗಳು, ಗ್ರಾಹಕರು, ಗುತ್ತಿಗೆದಾರರು ಇವರಿಗೆ ಮಹಿತಿಗಾಗಿ ನೇರ ಅಂಚೆಯನ್ನು ಬಳಸಲಾಗುವುದು. |

# ಅಧ್ಯಾಯ – 16

**ಸಾರ್ವಜನಿಕ ಮಾಹಿತಿ ನೀಡಲು ನಿಯೋಜಿಸಲಾದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರ:**

**ಸಂಸ್ಥೆಯ ಹೆಸರು** : **ಬಿ.ಎಂ.ಆರ್.ಸಿ.ಎಲ್**

ಸಾರ್ವಜನಿಕ ಮಾಹಿತಿ ಅಧಿಕಾರಿ

ಕ್ರಮ ಸಂಖ್ಯೆ : **1**

ಹೆಸರು : **ಬಿ.ಎಲ್. ಯಶವಂತ್ ಚವಾಣ್**

ಹೊಂದಿರುವ ಅಧಿಕಾರಿ : **ಅಧೀಕ್ಷಕ ಇಂಜಿನಿಯರ್ (ವಿ)**

ದೂರವಾಣಿ ಸಂಖ್ಯೆ (ಕಛೇರಿ) : **22969255**

ಫ್ಯಾಕ್ಸ್ : **22969222 (ಸಾಮಾನ್ಯ)**

ವಿಳಾಸ : **ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ,**
**3ನೇ ಮಹಡಿ, ಬಿ.ಎಂ.ಟಿ.ಸಿ ಕಾಂಪ್ಲೆಕ್ಸ್,**
**ಕೆ. ಹೆಚ್. ರಸ್ತೆ,**
**ಶಾಂತಿನಗರ,**
**ಬೆಂಗಳೂರು – 560 027.**

<u>ನಿರ್ಧಿಷ್ಟಪಡಿಸಿದ ಮೇಲ್ಮನವಿ ಪ್ರಾಧಿಕಾರದ ವಿವರ</u>

ಕ್ರಮ ಸಂಖ್ಯೆ : **1**

ಹೆಸರು : **ಎಂ. ಎಸ್. ನಾಗೇಂದ್ರ**

ಹೊಂದಿರುವ ಅಧಿಕಾರಿ : **ಕಾರ್ಯನಿರ್ವಾಹಕ ನಿರ್ದೇಶಕರು (ಆಡಳಿತ)**

ದೂರವಾಣಿ ಸಂಖ್ಯೆ (ಕಛೇರಿ) : **22969381**

ಫ್ಯಾಕ್ಸ್ : **22969222 (ಸಾಮಾನ್ಯ)**

ವಿಳಾಸ : **ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ,**
**3ನೇ ಮಹಡಿ, ಬಿ.ಎಂ.ಟಿ.ಸಿ ಕಾಂಪ್ಲೆಕ್ಸ್,**
**ಕೆ. ಹೆಚ್. ರಸ್ತೆ,**
**ಶಾಂತಿನಗರ,**
**ಬೆಂಗಳೂರು – 560 027.**